**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು ಇವರು ಸಾರ್ವಜನಿಕ ಮಹತ್ವದ ಜರೂರು ವಿಷಯವನ್ನು ಶೂನ್ಯ ವೇಳೆಯಲ್ಲಿ ಚರ್ಚಿಸಲಿರುವ ಕುರಿತು.**

**ವಿಷಯ:** ಸಾವಿರಾರು ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ಬೆಳಗಾವಿಯ ಸುವರ್ಣ ವಿಧಾನ ಸೌಧ ವರ್ಷದಲ್ಲಿ ಕೇವಲ ಕೆಲವು ದಿನಗಳಷ್ಟೇ ಬಳಸಲಾಗುತ್ತಿದೆ. ಯಾವುದೇ ಪ್ರಮುಖ ಇಲಾಖೆಗಳು ಇಲ್ಲಿಗೆ ತಾಶ್ವತವಾಗಿ ಸ್ಥಳಾಂತರವಾಗದೇ ಇರುವುದರಿಂದ ಈ ಭವ್ಯ ಕಟ್ಟಡ ಸಾರ್ವಜನಿಕ ಆಸ್ತಿ ನಿಷ್ಕ್ರಿಯವಾಗಿದ್ದು, ಜನರ ತೆರಿಗೆ ಹಣ ಪೂರ್ತಿಯಾಗಿ ವ್ಯರ್ಥವಾಗುತ್ತಿದೆ. ಇದರಿಂದ ಕಿತ್ತೂರು ಕರ್ನಾಟಕ ಪ್ರದೇಶದ ಮೇಲೆ ನಿರಂತರ ಆಡಳಿತಾತ್ಮಕ ನಿರ್ಲಕ್ಷ್ಯ ಮುಂದುವರಿದಿದೆ.

ಉತ್ತರ ಕರ್ನಾಟಕದ ಜನರು ಸುವರ್ಣ ವಿಧಾನ ಸೌಧವನ್ನು ಸಂಪೂರ್ಣ ಕಾರ್ಯನಿರ್ವಹಣಾ ಆಡಳಿತ ಕೇಂದ್ರವನ್ನಾಗಿ ಮಾಡುವಂತೆ ಹಲವಾರು ವರ್ಷಗಳಿಂದ ಬೇಡಿಕೆ ಇಟ್ಟುಕೊಂಡು ಉತ್ತರ ಕರ್ನಾಟಕದ ನಾಗರೀಕರು ಸರ್ಕಾರವನ್ನು ಒತ್ತಾಯಿಸುತ್ತಾ ಬಂದಿರುತ್ತಾರೆ. ಆದರೆ ಇದುವರೆಗೆ ಸರಕಾರದಿಂದ ಯಾವ ಕ್ರಮವನ್ನು ಕೈಗೊಂಡಿಲ್ಲ. ಆದ್ದರಿಂದ ಈ ಭವ್ಯ ಕಟ್ಟಡವನ್ನು ಆಡಳಿತಾತ್ಮಕವಾಗಿ ಮತ್ತು ಪರಿಣಾಮಕಾರಿಯಾಗಿ ಉಪಯೋಗಿಸುವುದು ಸರ್ಕಾರದ ಕರ್ತವ್ಯವಾಗಿರುತ್ತದೆ.

ಆದ್ದರಿಂದ ಈ ಕಟ್ಟಡದಲ್ಲಿ ಕನಿಷ್ಠ 10 ಪ್ರಮುಖ ಇಲಾಖೆಗಳ ಶಾಶ್ವತ ಕಚೇರಿಗಳನ್ನು ತಕ್ಷಣ ಸ್ಥಳಾಂತರಿಸುವುದು. ಸಚಿವಾಲಯದ ಶಾಖೆಯನ್ನು ಸ್ಥಾಪಿಸುವುದು ಮತ್ತು ವರ್ಷಪೂರ್ತಿ ಆಡಳಿತ ಕಾರ್ಯ ನಡೆಯುವ ವ್ಯವಸ್ಥೆಯನ್ನು ಮಾಡುವುದು ಅಗತ್ಯವಾಗಿದೆ ಎಂದು ಭಾವಿಸಿ ಸರ್ಕಾರದ ಗಮನಕ ತರುತ್ತಿದ್ದೇನೆ.

ಈ ವಿಷಯವು ಅತ್ಯಂತ ಪ್ರಮುಖ ಮತ್ತು ತುರ್ತು ಹಾಗೂ ಸಾರ್ವಜನಿಕ ಹಿತಕ್ಕಾಗಿ ತಕ್ಷಣ ಸದನದಲ್ಲಿ ಚರ್ಚೆಗೆ ಬರಬೇಕಾಗಿದೆ ಹಾಗೂ ಪ್ರಮುಖ ಇಲಾಖೆಗಳನ್ನು ಬೆಳಗಾವಿಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಬೇಕಾಗಿ ಶೂನ್ಯ ವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ಉತ್ತರ ಕರ್ನಾಟಕದ ನಾಗರೀಕರ ಪರವಾಗಿ ಮನವಿ ಮಾಡುತ್ತೇನೆ.

**ಉತ್ತರ:**

2019-20ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ಯೋಇ : 75 : ಯೋಪರ : 2018 (ಭಾಗ-6), ದಿನಾಂಕ:30-06-2020ರನ್ವಯ ಹಾಗೂ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆದೇಶ ಸಂಖ್ಯೆ:ಕಂಶಾ/ಲೋಇ/ವಿವ/52020-21, ದಿನಾಂಕ:29-07-2020ರನ್ವಯ ವಿವಿಧ ಇಲಾಖೆಯ 28 ಕಛೇರಿಗಳನ್ನು ಬೆಳಗಾವಿಯ ಸುವರ್ಣ ವಿಧಾನ ಸೌಧಕ್ಕೆ ಸ್ಥಳಾಂತರಿಸಲಾಗಿದೆ. ಸ್ಥಳಾಂತರಗೊಂಡ ಕಛೇರಿಗಳು ಪ್ರಸ್ತುತ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಮತ್ತು ಚಳಿಗಾಲದ ಬೆಳಗಾವಿ ಅಧಿವೇಶನವನ್ನು ನಿರಂತರವಾಗಿ ಬೆಳಗಾವಿ ಸುವರ್ಣ ಸೌಧದಲ್ಲಿ ಆಯೋಜಿಸುತ್ತಿರುವುದರಿಂದ, ಅಧಿವೇಶನ ಸಮಯದಲ್ಲಿ ಸಚಿವರ ಕಛೇರಿಗಳು / ಪೂರಕವಾಗಿ ಸಚಿವಾಲಯದ ಕಾರ್ಯಾಲಯಗಳು ಕಾರ್ಯನಿರ್ವಹಿಸುತ್ತಿರುವುದರಿಂದ ಬೆಳಗಾವಿ ಸುವರ್ಣ ವಿಧಾನ ಸೌಧ ಕಟ್ಟಡವು ನಿಷ್ಕ್ರಿಯವಾಗಿರದೇ ಕಾರ್ಯನಿರ್ವಹಣ ಮಾಡಲಾಗುತ್ತಿರುವುದರಿಂದ. ಈಗಾಗಲೇ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಒಟ್ಟು 28 ಕಛೇರಿಗಳು (ಪ್ರತಿ ಲಗತ್ತಿಸಿದೆ) ಕಾರ್ಯನಿರ್ವಹಿಸುತ್ತಿರುವುದರಿಂದ ಬೇರೆ ಕಛೇರಿಗಳಿಗೆ ಪ್ರಸ್ತುತ ಸ್ಥಳಾವಕಾಶ ಕಲ್ಪಿಸಲು ಸಾಧ್ಯವಾಗುವುದಿಲ್ಲ.

ಸಂಖ್ಯೆ: ಪಿಡಿಎಸ್ 159 ಪಿ.ಆರ್.ಐ 2025

(ಡಿ.ಸುಧಾಕರ್)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು

# ಸುವರ್ಣ ವಿಧಾನ ಸೌಧ ಬೆಳಗಾವಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಛೇರಿಗಳ ಮಾಹಿತಿ

| ಮಹಡಿ | | ಕಛೇರಿಗಳ ಹೆಸರು | ಹಂಚಿಕೆಯಾದ ಕೊಠಡಿಗಳು | ಸುವರ್ಣ ಸೌಧ ಕಟ್ಟಡದಲ್ಲಿ ವಿವಿಧ ಇಲಾಖೆಗಳು ಸ್ಥಳಾಂತರಗೊಂಡ ದಿನಾಂಕ |
|---|---|---|---|---|
| ತಳ ಮಹಡಿ | 1 | ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಬೆಳಗಾವಿ | North EAST Corner | 07-09-2020 |
| | 2 | ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಬೆಳಗಾವಿ | B1, B2 | 01-09-2020 |
| | 3 | ಶಿಶು ಅಭಿವೃದ್ಧಿ ಯೋಜನೆ ಕಛೇರಿ, ಬೆಳಗಾವಿ (ಗ್ರಾಮೀಣ) | B3,B4, B5 | 01-09-2020 |
| | 4 | ಜಂಟಿ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ. ಪಶ್ಚಿಮ ವಲಯ ವಿಭಾಗ ಬೆಳಗಾವಿ | B 12 | 01-09-2020 |
| | 5 | ಸಹಾಯಕ ಆಯುಕ್ತರು (ಭೂಸ್ವಾಧೀನ) ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಬೆಳಗಾವಿ **(KSHIP)** | B 13 | 05-09-2020 |
| | 6 | ಸಹಾಯಕ ಪ್ರಧಾನ ವ್ಯವಸ್ಥಾಪಕರು, ಡಿ.ದೇವರಾಜ ಅರದು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಬೆಳಗಾವಿ | TP-1 TP-2 | 18-09-2020 |
| | 7 | ಹಿರಿಯ ಭೂವಿಜ್ಞಾನ ಜಿಲ್ಲಾ ಅಂತರ್ಜಲ ನಿರ್ದೇಶನಾಲಯ ಬೆಳಗಾವಿ | TP-4 | 01-09-2020 |
| | 8 | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಬೆಳಗಾವಿ | TP-11, 12 | 28-04-2022 |
| | 9 | ಉಪ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ, ಬೆಳಗಾವಿ | TP- 14 | 01-09-2020 |
| | 10 | ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಬೆಳಗಾವಿ | TP- 18 | 18-09-2020 |
| | 11 | ಭಾರತೀಯ ಸ್ಟೇಟ್ ಬ್ಯಾಂಕ್ **(SBI)** | South west corner | 20-10-2020 |
| ನೆಲ ಮಹಡಿ | 12 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಸುವರ್ಣ ಸೌಧ ಉಪ ವಿಭಾಗ ಬೆಳಗಾವಿ | 11 | 11-10-2012 |
| | 13 | ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಬೆಳಗಾವಿ | 12 | 27-08-2020 |
| | 14 | ಜಂಟಿ ನಿರ್ದೇಶಕರು, ಸಹಕಾರ ಸಂಘಗಳ, ಲೆಕ್ಕಪರಿಶೋಧನಾ ಇಲಾಖೆ ಬೆಳಗಾವಿ | 16, 17 | 01-09-2020 |
| | 15 | ಪೋಲಿಸ್ ಇನ್ಸಪೆಕ್ಟರ ರವರ ಕಛೇರಿ (ಕೆ.ಎಸ್.ಐ.ಎಸ್.ಎಫ್) ಐ.ಎಸ್.ಡಿ ಸುವರ್ಣ ಸೌಧ ಬೆಳಗಾವಿ | 21, 22 ,38 | 01-03-2020 |
| | 16 | ಕಾರ್ಯನಿರ್ವಾಹಕ ಅಭಿಯಂತರರು ಮಾರುಕಟ್ಟೆ ಅಭಿವೃದ್ಧಿ ಯೋಜನೆ ಕೃಷಿ ಮಾರಾಟ ಇಲಾಖೆ, ಬೆಳಗಾವಿ ವಿಭಾಗ ಬೆಳಗಾವಿ | 23, 24 | 18-09-2020 |
| | 17 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮಾರುಕಟ್ಟೆ ಅಭಿವೃದ್ಧಿ ಯೋಜನ ಕೃಷಿ ಮಾರಾಟ ಇಲಾಖೆ, ಉಪ ವಿಭಾಗ ಬೆಳಗಾವಿ | 25, 26 | 18-09-2020 |
| | 18 | ಉಪ ಮುಖ್ಯ ವಿದ್ಯುತ್ ಪರಿವೀಕ್ಷರ ಕಛೇರಿ, ಬೆಳಗಾವಿ | 63, 64 | 01-09-2020 |
| 1ನೇ ಮಹಡಿ | 19 | ಉಪ ಪ್ರಧಾನ ವ್ಯವಸ್ಥಾಪಕರು ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಳಗಾವಿ | 122 | 01-09-2020 |
| | 20 | ಜಿಲ್ಲಾ ವ್ಯವಸ್ಥಾಪಕರು ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಳಗಾವಿ | 123 | 01-09-2020 |
| | 21 | ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ, ಬೆಳಗಾವಿ | 141, 142, 142A, 143, 143A, 144A, 144, | 18-05-2020 |
| 2ನೇ ಮಹಡಿ | 22 | ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಳಗಾವಿ | 209A | 01-09-2020 |
| | 23 | ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ಬೆಳಗಾವಿ | 221 | 07-09-2020 |
| | 24 | ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ ನಿಯಮಿತ ಬೆಳಗಾವಿ | 222 | 16-09-2020 |
| 3ನೇ ಮಹಡಿ | 25 | ಜಂಟಿ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಳಗಾವಿ | 305, 306A | 10-02-2022 |
| | 26 | ಮುಖ್ಯ ಇಂಜಿನೀಯರರು ರಾಷ್ಟ್ರೀಯ ಹೆದ್ದಾರಿಗಳು , ಉತ್ತರ ವಲಯ ಬೆಳಗಾವಿ | 308, 309, 310, 311, 312, 313, 313A | 17-01-2024 |
| | 27 | ವಿಶೇಷ ಜಿಲ್ಲಾಧಿಕಾರಿಗಳು, ಭೂ ಸ್ವಾಧೀನ ಪುನರ್ವಸತಿ ಮತ್ತು ಪುನರ್ ನಿರ್ಮಾಣ, ಬೃಹತ್ ನೀರಾವರಿ ಯೋಜನೆಗಳು, ಬೆಳಗಾವಿ | 322, 323 | 17-09-2020 |
| | 28 | ಜಂಟಿ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ಬೆಳಗಾವಿ | TP 9, 334 | 20-04-2024 |

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ಸುವರ್ಣ ಸೌಧ ಉಪ ವಿಭಾಗ ಬೆಳಗಾವಿ